ಹರಣಿಗೆ ಹೇಳುವುದಾದರೆ, ಈ ಕಾರ್ಖಾನೆಯಲ್ಲಿರತಕ್ಕ ಕಾರ್ಮಿಕರಿಗೆ ಬಹಳ ಹೆಚ್ಚಿನ ಸಂಬಳ ಸಾರಿಗೆ ಗಳನ್ನು ಕೊಡಲಾಗುತ್ತಿದೆ. ಬೇರೆ ಯಾವುದೇ ಖಾಸಗಿ ಕಾರ್ಖಾನೆಗಳಲ್ಲೂ ಇಷ್ಟು ಕೊಡುವುದಿಲ್ಲ. ಅಷ್ಟೇ ಅಲ್ಲ. ಉತ್ಪಾದನಾ ವೆಚ್ಚವನ್ನು ತೆಗೆದ ಕೊಂಡರೆ ಈ ಕಾರ್ಖಾನೆಯಲ್ಲಿ ೧ ವ್ಯಾಟರ್‌ಗೆ ೫೨ ರೂಪಾಯಿ ಆದರೆ ಖಾಸಗಿ ಕಾರ್ಖಾನೆಗಳಲ್ಲಿ ೧ ವ್ಯಾಟರ್‌ಗೆ ೧೫ ರೂಪಾಯಿ ಉತ್ಪಾದನಾ ವೆಚ್ಚ ಬೀಳುತ್ತದೆ. ಈ ಕಾರಣದಿಂದಾಗಿ ಮುಕ್ತ ಮಾರುಕಟ್ಟೆಯಲ್ಲಿ ಇರತಕ್ಕ ಪೈಪೋಟಿಯಲ್ಲಿ ಸ್ಪರ್ಧೆ ಮಾಡುವುದ ಕ್ಕಾಗುತ್ತಿಲ್ಲ. ಇಲ್ಲಿ ಉತ್ಪಾದನೆಯಾದ ಬಟ್ಟೆಯನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ಆಗುತ್ತಿಲ್ಲ. ಸುಮಾರು ೬-೭ ಕೋಟಿ ರೂಪಾಯಿಗಳಷ್ಟು ಬೆಲೆಯ ಉತ್ಪಾದನಾ ಬಟ್ಟೆ ವಿಚಾರಗದ ಉಳಿದಿದೆ. ಕಾರ್ಮಿಕರ ಕೆಲವು ಬೇಡಿಕೆಗಳನ್ನು ನಾವು ಈಡೇರಿಸಿದ್ದೇವೆ ಆದರೆ ಕಾಲುಚೀಲ, ಬೂಟು ಸಮವಸ್ತ್ರ ಇಂಥ ಕೆಲವು ಬೇಡಿಕೆಗಳನ್ನು ಆರ್ಥಿಕ ತೊಂದರೆಯಿಂದಾಗಿ ಈಡೇರಿಸಲು ಸಾಧ್ಯವಾಗಿಲ್ಲ. ಈ ಕಾರ್ಖಾನೆಯ ಉತ್ಪಾದನೆ ವಿಚಾರ್ತು ಸಾಧಿಸಿದ ಗುರಿಯ ಬಗ್ಗೆ ಹೇಳಿದ್ದೇನೆ. ಕಾರ್ಮಿಕರೂ ಕೂಡ ಉತ್ಪಾದನೆಗೆ ಯಾವುದೇ ರೀತಿಯಿಂದಲೂ ಧಕ್ಕೆ ಉಂಟಾಗದಂತೆ ಕಾರ್ಖಾನೆಯವರ ಜೊತೆ ಸಹಕರಿಸಿದರೆ ಅವರ ಉಳಿದ ಬೇಡಿಕೆಗಳನ್ನೂ ಕೂಡ ನಾವು ಈಡೇರಿಸುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಕಾರ್ಮಿಕರು ಈ ದಿಸೆಯಲ್ಲಿ ತಮ್ಮ ಸಹಕಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಕೃಷ್ಣ (ರೇಷ್ಮೆ ಖಾತೆ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಉತ್ತರಗಳನ್ನು ಮಂಡಿಸಲಾಯಿತು

ಬೆಳ್ತಂಗಡಿಯಿಂದ ಬೆಂಗಳೂರಿಗೆ ಸುಖಾಸೀನ ಬಸ್ಸನ್ನು ಒದಗಿಸುವುದು

೪೦೬೨ **ಶ್ರೀ ಕೆ. ವಸಂತ ಬಂಗೇರ,** (ಬೆಳ್ತಂಗಡಿ).—ಮಾನ್ಯ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಳ್ತಂಗಡಿಯಿಂದ ಧರ್ಮಸ್ಥಳ-ಗುಡ್ಡೆ ಮಾರ್ಗವಾಗಿ ಬೆಂಗಳೂರಿಗೆ ಸುಖಾಸೀನ ಬಸ್ ಸರ್ವೀಸನ್ನು ಪ್ರಾರಂಭಿಸಬೇಕೆಂಬ ಬೇಡಿಕೆ ಕೆಲವು ವರ್ಷಗಳಿಂದ ಇದ್ದರೂ ಈ ಕುರಿತು ವಿಳಂಬವಾಗುತ್ತಿರಲು ಕಾರಣಗಳೇನು ?

ಆ) ಈಗಿರುವ ಅರೆಸುಖಾಸೀನ ಬಸ್ಸುಗಳಲ್ಲಿ ಬೆಂಗಳೂರಿಗೆ ಸೀಟು ಸಿಗದೆ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬೆಳ್ತಂಗಡಿ-ಧರ್ಮಸ್ಥಳ ಮಾರ್ಗವಾಗಿ ಬೆಂಗಳೂರಿಗೆ ಸುಖಾಸೀನ ಬಸ್ ಸೌಕರ್ಯವನ್ನು ಎಷ್ಟು ಸಮಯದೊಳಗೆ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತದೆ ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಬೆಳ್ತಂಗಡಿಯಿಂದ ಧರ್ಮಸ್ಥಳ ಮಾರ್ಗವಾಗಿ ಬೆಂಗಳೂರಿಗೆ ಸುಖಾಸೀನ ಬಸ್ ಸರ್ವೀಸನ್ನು ಬಯಸುವ ಪ್ರಯಾಣಿಕರ ಒತ್ತಡ ಅಷ್ಟಾಗಿಲ್ಲದಿರುವುದರಿಂದ ಈ ಬಸ್ಸು ಸರ್ವೀಸನ್ನು ಪ್ರಾರಂಭಿಸಿಲ್ಲ.

ಆ) ಬಂದಿಲ್ಲ

ಇ) ಪ್ರಯಾಣಿಕರ ಒತ್ತಡದ ಬಗ್ಗೆ ಸರ್ವೆ ಮಾಡಿಸಿ ಅವಶ್ಯಕತೆ ಇದ್ದಲ್ಲಿ ಪರಿಶೀಲಿಸಲಾಗುವುದು.